ಡಾ. ಡಿ.ಎಸ್. ರವೀಂದ್ರನ್, ಭಾ.ಅ.ಸೇ.
ಸರ್ಕಾರದ ಕಾರ್ಯದರ್ಶಿ (ಖಜಾನೆ-2) ಮತ್ತು
ಪದನಿಮಿತ್ತ ಆಯುಕ್ತರು, ಖಜಾನೆ
ಆರ್ಥಿಕ ಇಲಾಖೆ

7ನೇ ಮಹಡಿ, ಕಾಳಿದಾಸ ಮಾರ್ಗ
ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡ
ಗಾಂಧಿನಗರ, ಬೆಂಗಳೂರು – 560 009

ಅ.ಸ ಪತ್ರ ಸಂ.: ಖ–2/ಪಿ.ಎಂ.ಯು/92/2015–16

ದಿನಾಂಕ: 12.07.2016

ಪ್ರಿಯ ಶ್ರೀ ತಲ್ವಾರ್‌ಕರ್,

ವಿಷಯ: ಖಜಾನೆ–2, ಅನುಕಲನ ಹಣಕಾಸು ನಿರ್ವಹಣೆ ವ್ಯವಸ್ಥೆಯಲ್ಲಿ (Integrated Financial Management System –IFMS) ಇಲಾಖೆಗಳ ಆರ್ಥಿಕ ವಹಿವಾಟುಗಳನ್ನು ನಿರ್ವಹಿಸುವ ಕುರಿತು.

ಉಲ್ಲೇಖ: ಈ ಕಚೇರಿಯ ಸಮ ಸಂಖ್ಯೆ ಅ.ಸ ಪತ್ರ ದಿನಾಂಕ : 04.05.2016, 13.05.2016 ಮತ್ತು 08.06.2016

E-Gov/Cell upload on website

****–****

ಉಲ್ಲೇಖಿತ ಪತ್ರಗಳತ್ತ ತಮ್ಮ ಗಮನವನ್ನು ಸೆಳೆಯಲಾಗಿದೆ. ದಿನಾಂಕ 01.07.2016 ರಿಂದ ತಮ್ಮ ಇಲಾಖೆಯಲ್ಲಿ ಖಜಾನೆ-2 ಅನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿ, ಈ ಸಂಬಂಧ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲು ಕೋರಲಾಗಿತ್ತು.

1. ಅದರಂತೆ ಈವರೆವಿಗೆ ತಮ್ಮ ಇಲಾಖೆಯಲ್ಲಿ ಖಜಾನೆ-2ರಲ್ಲಿ ಅಧಿಕಾರಿ/ಸಿಬ್ಬಂದಿಗಳ ನೋಂದಣಿ, ಬಯೋಮೆಟ್ರಿಕ್ ನೋಂದಣಿ, ಡಿ.ಎಸ್.ಸಿ ಕೋರಿಕೆ ಹಾಗೂ ಸಂಗ್ರಹಣೆ ಮುಂತಾದ ಬಹುತೇಕ ಪೂರ್ವ ಸಿದ್ಧತೆಗಳು ಪೂರ್ಣಗೊಂಡಿರುತ್ತವೆ.
2. ತಮ್ಮಿಂದ ನಿಯೋಜಿಸಲ್ಪಟ್ಟ ಅಧಿಕಾರಿ/ಸಿಬ್ಬಂದಿಗಳಿಗೆ ಖಜಾನೆ-2ರಲ್ಲಿ ಕಾರ್ಯ ನಿರ್ವಹಿಸುವ ಹ್ಯಾಂಡ್ಸ್ ಆನ್ (hands on)ತರಬೇತಿಯನ್ನು ಸಹ ನೀಡಲಾಗಿದೆ.
3. ತರಬೇತಿ ಸಮಯದಲ್ಲಿ ಚಟುವಟಿಕೆಗಳ ಮ್ಯಾನುಯಲ್ ಅನ್ನು ಸಹ ಸಿಡಿಯಲ್ಲಿ ನೀಡಲಾಗಿದೆ.

ಇನ್ನು ಉಳಿದ ಕೆಲವೊಂದು ಚಟುವಟಿಕೆಗಳನ್ನು ಪೂರ್ಣಗೊಳಿಸಿಕೊಳ್ಳಲು ಇನ್ನೊಂದು ತಿಂಗಳ ಕಾಲಾವಕಾಶ ನೀಡಲಾಗಿದ್ದು, ದಿನಾಂಕ 01.08.2016ರಿಂದ ತಮ್ಮ ಇಲಾಖೆಯಲ್ಲಿ ಖಜಾನೆ-2ಅನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. **ಆದುದರಿಂದ 31.07.2016 ರೊಳಗೆ ಈ ಕೆಳಕಂಡ ಚಟುವಟಿಕೆಗಳನ್ನು ಪೂರ್ಣಗೊಳಿಸಲು ಕೋರಿದೆ.**

1. ತಮ್ಮ ಇಲಾಖೆಯ ಡಿಡಿಓ ಕಚೇರಿಯಲ್ಲಿ ಪಾವತಿಗಳನ್ನು ಸ್ವೀಕರಿಸುವ ಪ್ರತಿಯೊಬ್ಬ ಸಿಬ್ಬಂದಿ/ಅಧಿಕಾರಿಗಳನ್ನು ಖಜಾನೆ-2 ರಲ್ಲಿ ಸ್ವೀಕರ್ತರನ್ನಾಗಿ (Recipient) ನೋಂದಾಯಿಸುವುದು.
2. ತಮ್ಮ ಇಲಾಖೆಯಿಂದ ಪಾವತಿ ಪಡೆಯುವ ಇತರೆ ಸಾರ್ವಜನಿಕರು/ಸಂಸ್ಥೆಗಳನ್ನು ಖಜಾನೆ-2 ಸ್ವೀಕರ್ತರನ್ನಾಗಿ ನೋಂದಾಯಿಸುವುದು.
3. ಖಜಾನೆ-2ರಿಂದ ಒದಗಿಸಲಾದ ಇಲಾಖೆಯು ವ್ಯವಹರಿಸುವ ಬಜೆಟ್ ಲೈನ್ ವಿವರಗಳನ್ನು ಖಚಿತಪಡಿಸುವುದು.
4. ಬಜೆಟ್ ಲೈನ್ - ಡಿಡಿಓ - ಸಿಓ -ಸಿಎಸ್ ಓ - ಸಿಸಿಓ ಮ್ಯಾಪಿಂಗ್ ಅನ್ನು ಖಚಿತಪಡಿಸುವುದು.

...2

ದೂರವಾಣಿ: 080–2234 2888; ಫ್ಯಾಕ್ಸ್: 080–2235 4020
080–2234 2866
ಇ–ಮೇಲ್: secyk2-fd@karnataka.gov.in

5. ಬಜೆಟ್ ಲೈನ್ - ಬಿಲ್ಲು ವಿಧ - ಕ್ಲೇಂ ವಿಧ -ಮ್ಯಾಪಿಂಗ್ ಅನ್ನು ಖಚಿತಪಡಿಸುವುದು.
6. ಹೆಚ್.ಆರ್.ಎಂ.ಎಸ್ ನೊಂದಿಗೆ ಸಿಬ್ಬಂದಿ ಚಾಲ್ತಿ ಅವಧಿ ಮ್ಯಾಪಿಂಗ್ (Currency of Establishment Mapping) ಅನ್ನು ಖಜಾನೆ-2 ಕ್ಕೆ ಒದಗಿಸುವುದು.

ಮೇಲ್ಕಂಡ ಚಟುವಟಿಕೆಗಳನ್ನು ಆದ್ಯತೆ ಮೇರೆಗೆ 31.07.2016 ರೊಳಗೆ ಪೂರೈಸಿಕೊಳ್ಳಲು ತಮ್ಮ ಇಲಾಖೆಯ ಎಲ್ಲಾ ಡಿಡಿಓಗಳಿಗೆ ಸೂಚನೆ ನೀಡಲು ಕೋರಿದೆ. ಯಾವುದೇ ಸ್ಪಷ್ಟೀಕರಣಕ್ಕಾಗಿ ಯೋಜನಾ ನಿರ್ದೇಶಕರು, ಖಜಾನೆ-2, ಪಿ.ಎಂ.ಯು ಘಟಕ ಇವರನ್ನು ಸಂಪರ್ಕಿಸುವಂತೆ ಸೂಚಿಸಲು ಸಹ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಿ.ಎಸ್.ರವೀಂದ್ರನ್)

ಶ್ರೀ ಹೆಚ್.ಯು ತಳವಾರ್,
ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು.